ತಮ್ಮ ಮಗಳನ್ನು ಉಚ್ಚ ಶಿಕ್ಷಣ ಪಡೆದ ವರನನ್ನು ಹುಡುಕಿ ಇಪ್ಪತ್ತೆರಡನೆಯ ವಯಸ್ಸಿಗೆ ಮದುವೆ ಮಾಡಿದ್ದರು. ಆದ್ದರಿಂದ ನನ್ನ ತಾಯಿಯೂ ಲಿಬರಲ್ ಆಗಿ ಬೆಳೆಯಲು ಸಾಧ್ಯವಾಯಿತು. ನಮಗೂ ಅಂಥ ವಾತಾವರಣವನ್ನು ಚಿಕ್ಕಂದಿನಿಂದಲೇ ಕಲ್ಪಿಸಿದರು. ಅವರು ಮರಾಠಿ ಮೊದಲು ಕಲಿತದ್ದು. ಮದುವೆಯ ನಂತರ ಕನ್ನಡ ಹಾಗೂ ಇಂಗ್ಲಿಷ್ ಕಲಿತರು. ಅವರಿಂದಲೇ ನನ್ನೊಳಗೂ ವಿಶಾಲವಾಗಿ ಆಲೋಚಿಸುವ ಕ್ರಮ ಹಾಸುಹೊಕ್ಕಾಗಿ ಬೆಳೆಯಿತು. ಹೆಣ್ಣುಮಕ್ಕಳು ಸ್ವತಂತ್ರವಾಗಿ ಬದುಕಬೇಕು, ಯಾರ ದಬ್ಬಾಳಿಕೆಗೂ ಬಗ್ಗಬಾರದು, ಸವಾಲುಗಳೆದುರು ತಲೆಯೆತ್ತಿ ಬದುಕಬೇಕು ಎನ್ನುತ್ತಿದ್ದರು. ಆಗೆಲ್ಲ 'ಸ್ತ್ರೀವಾದ' ಎಂಬ ಪದದ ಅರಿವಿಲ್ಲದಿದ್ದರೂ ಅಂಥ ಆಲೋಚನೆಗಳು ಅವರಿಂದ ನನ್ನಲ್ಲೂ ಬರತೊಡಗಿದ್ದವು.

**◆ ಕನ್ನಡ ಹಾಗೂ ಮರಾಠಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಸರಗಳ ನಂಟು ನಿಮ್ಮನ್ನು ಭಿನ್ನವಾಗಿ ನಿಲ್ಲುವಂತೆ ಮಾಡಿದವೇನೋ ಅಲ್ಲವಾ?**

ನಾನು ಚಿಕ್ಕವಳಿದ್ದಾಗಲೇ ಮರಾಠಿ ಸಾಹಿತ್ಯದ ಸಂವೇದನೆಯನ್ನು ಪಡೆದುಕೊಂಡೆ. ಶಾಲೆಯಲ್ಲಿ ಹಿಂದಿಯನ್ನು ಕಲಿಯುತ್ತಿದ್ದುದರಿಂದ ಮರಾಠಿ ಓದುವುದೇನೂ ಕಷ್ಟವೆನಿಸಲಿಲ್ಲ. ನನ್ನ ತಾಯಿ ಮತ್ತು ಅಜ್ಜಿ, ಅಂದರೆ ನಮ್ಮ ತಾಯಿಯ ಚಿಕ್ಕಮ್ಮ ಮನೆಯಲ್ಲಿ ಮರಾಠಿ ಮಾತನಾಡುತ್ತಿದ್ದರು. ಅವರು ಬಾಲವಿಧವೆ. ಮೊದಲಿನಿಂದ ತಾಯಿಯ ಜೊತೆ ಅವರಿದ್ದರು. ನಂತರ ಬಾಗಲಕೋಟೆಗೆ ಹೋದಮೇಲೆ ನನ್ನ ತಾಯಿ ಕನ್ನಡ, ಇಂಗ್ಲಿಷ್ ಕಲಿತರು. ಸಾಹಿತ್ಯದ ಬಗೆಗೆ ಅವರಿಗೆ ಬಹಳ ಆಸಕ್ತಿಯಿತ್ತು. ಅಂದಿನ ಕಾಲದಲ್ಲೇ ಬಹಳ ಆಧುನಿಕ ಚಿಂತನೆಯಿತ್ತು. ನಾವಿನ್ನೂ ಅವರಷ್ಟು ಮುಂದುವರಿದಿಲ್ಲ ಎಂದು ಒಮ್ಮೊಮ್ಮೆ ಅನಿಸುತ್ತದೆ. 'ಕಿರ್ಲೋಸ್ಕರ್' ಮತ್ತು 'ಸ್ತ್ರೀ' ಎಂಬ ಮಾಸಿಕ ಪತ್ರಿಕೆಗಳನ್ನು ತರಿಸುತ್ತಿದ್ದರು. ಆ ಪತ್ರಿಕೆಗಳಲ್ಲಿ ಬರೆಯುತ್ತಿದ್ದವರೆಲ್ಲ ಮರಾಠಿ ಬರಹಗಾರರು. ಫಡಕೆ, ದಾಂಡೇಕರ, ದೇಸಾಯಿ ಮುಂತಾದ ಆಧುನಿಕ ವಿಚಾರಧಾರೆಯ ಬರಹಗಾರರು. ಸಹಜವಾಗಿ ಅವರಿಂದ ನಾನು ಪ್ರಭಾವಿತಳಾಗಿದ್ದೆ.

ನನ್ನ ತಂದೆ ಬಲರಾಮಾಚಾರ್ಯ ಎಲಬುರ್ಗಿಯವರು ರಸಾಯನಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಜೊತೆಗೆ ಆಯುರ್ವೇದ ತಜ್ಞರೂ ಆಗಿದ್ದರು. ಬಾಗಲಕೋಟೆಯಲ್ಲಿ ಬಸವೇಶ್ವರ ಕಾಲೇಜನ್ನು ಡಾ. ನಂದೀಮಠರು ಪ್ರಾರಂಭಿಸಿದಾಗ ತಂದೆಯವರೂ ಜೊತೆಗೂಡಿ, ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಒಳ್ಳೆಯ ವಿಜ್ಞಾನಿಯೂ ಆಗಿದ್ದರು. ಅವರ ಪ್ರಸಿದ್ಧಿ ಹೇಗಿತ್ತೆಂದರೆ, ಮುಂಬೈ ಮತ್ತು ಪುಣೆಗಳಿಂದಲೂ ಬಿ.ಎಸ್ಸಿ ರಸಾಯನಶಾಸ್ತ್ರ ಓದಲು ವಿದ್ಯಾರ್ಥಿಗಳು ಬರುತ್ತಿದ್ದರು. ಆ ಕಾಲದಲ್ಲಿ ನನ್ನ ತಂದೆ ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯವನ್ನು ಓದುತ್ತಿದ್ದರು. ವಿಶೇಷವಾಗಿ ಎಂ. ರಾಮಮೂರ್ತಿಯವರ ಪತ್ತೇದಾರಿ ಕಾದಂಬರಿಗಳು, ಕೆರೂರು ವಾಸುದೇವಾಚಾರ್ಯರು, ಗಳಗನಾಥರು ಮುಂತಾದವರ ಬರಹಗಳನ್ನು ಓದುತ್ತಿದ್ದರು. ಖ್ಯಾತ ಪ್ರಕಾಶಕರಾದ ಜಿ.ಬಿ. ಜೋಶಿಯವರು ಅವರ ಸಹಪಾಠಿಯಾಗಿದ್ದರು. ಅವರ ಪುಸ್ತಕಗಳು ಪ್ರಕಟವಾದಾಗ ತರುತ್ತಿದ್ದರು. ಹೀಗೆ ಜಿ.ಬಿ. ಜೋಶಿಯವರ ಆಶೀರ್ವಾದದಿಂದ ಮತ್ತು ತಂದೆ ತಾಯಿಗಳಿಂದ ಹಾಗೂ ಪರಿಸರದಿಂದ ಏನು ದಕ್ಕಿತೋ ಅದರ ಆಧಾರದ ಮೇಲೆಯೇ ನನ್ನ ಚಿಂತನೆ ಬೆಳೆಯಿತು ಅನಿಸುತ್ತದೆ.

**◆ ಸ್ತ್ರೀ ಅಸ್ಮಿತೆಯನ್ನು ಗಾಢವಾಗಿ ಪರಿಭಾವಿಸಿದವರು ನೀವು. ಅದನ್ನು ಮರೆಮಾಚುವ, ಅಳಿಸಿಹಾಕುವ ಸಂಗತಿಗಳೊಂದಿಗೆ ಗುದ್ದಾಟಕ್ಕೆ ಬಿದ್ದವರು. ನೀವದನ್ನು ಪರಿತಾಪದಲ್ಲಿ, ಹರಿತ ವ್ಯಂಗ್ಯದಲ್ಲಿ, ಸಶಕ್ತ ರೂಪಕಗಳಲ್ಲಿ ಪ್ರಕಟಿಸಿದಿರಿ. ಸ್ತ್ರೀ ನಿಮ್ಮ ಬರಹದ ಕೇಂದ್ರವಾಗಲು ಇನ್ನೇನು ಕಾರಣಗಳು?**

